ಓ.ಎಸ್.188/2021 ಡಿ.ಡಬ್ಲು-3
*ಯಂಕಪ್ಪ ತಂದೆ ಶಂಬಣ್ಣ*

ದಿ.17-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ಆರ್.ಎಮ್. ವೈ ವಕೀಲರಿಂದ:-**

ಈ ದಿನ ಮರಿಯಪ್ಪನೇ ನ್ಯಾಯಾಲಯಕ್ಕೆ ಕರೆ ತಂದಿರುತ್ತಾನೆ ಎಂದರೆ ಸರಿ. ನನ್ನ ಪ್ರಮಾಣ ಪತ್ರವನ್ನು ನಾನೇ ಬರೆಸಿರುತ್ತೇನೆ. 1ನೇ ಪ್ರತಿವಾದಿ ಮನೆ ಕಟ್ಟಿಸುತ್ತಿರುವ ಸರ್ವೆ ನಂ.63. ಅದು ಸರ್ಕಾರಕ್ಕೆ ಸಂಬಂಧಪಟ್ಟ ಜಮೀನಾಗಿರುತ್ತದೆ. ಆ ಜಮೀನಿನ ಪಶ್ಚಿಮ ದಿಕ್ಕಿಗೆ ವಾದಿಯ ಹೊಲ ಇರುತ್ತದೆ. ಮನೆ ಮಂಜೂರಾದ ಬಗ್ಗೆ ನಾನು ಕಾಗದ ಪತ್ರ ನೋಡಿರುವುದಿಲ್ಲ. ಮರಿಯಪ್ಪನಿಗೆ ರಾಜೀವ ಗಾಂಧಿ ವಸತಿ ನಿಗಮ ವತಿಯಿಂದ ಮನೆ ಕಟ್ಟಲು ಫಲಾನುಭವಿ ಎಂದು ಆಯ್ಕೆಯಾಗಿದ್ದು ಹಣ ಮಂಜೂರಾಗಿದೆ ಎಂದು ಬರೆಸಿರುತ್ತೇನೆ. ಕಾಗದ ಪತ್ರ ಸರಿ ಇದ್ದರೆ ಮಾತ್ರ ಹಣ ಮಂಜೂರಾಗುತ್ತದೆ ಎಂದರೆ ಸರಿ. ಮರಿಯಪ್ಪನ ಹಕ್ಕುಪತ್ರವನ್ನು ನಾನು ನೋಡಿರುತ್ತೇನೆ. ವಾದಿಗೆ ಮತ್ತು ಪ್ರತಿವಾದಿಯರಿಗೆ ಮೊದಲಿನಿಂದಲೂ ಸರಿ ಇರುವುದಿಲ್ಲ. ಆ ಕಾರಣಕ್ಕೆ ಈ ದಾವೆ ಹಾಕಿರುತ್ತಾನೆ. ವಾದಿ ಮತ್ತು ಪ್ರತಿವಾದಿಯರ ನಡುವೆ ಮೊದಲು ಕೇಸು ನಡೆದಿದ್ದವು ಎಂದರೆ ಸರಿ. ಹೀಗಾಗಿ ವಾದಿಯ ಜಮೀನಿನಲ್ಲಿ ಪೂರ್ವ ದಿಕ್ಕಿಗೆ 1ನೇ ಪ್ರತಿವಾದಿ ಮನೆ ಕಟ್ಟಿಸುತ್ತಿದ್ದಾನೆ ಎಂದರೆ ಸರಿಯಲ್ಲ. ಗುಡ್ಡದ ಸರ್ವೆ ನಂ.63. ಮನೆ ಕಟ್ಟುವ ಜಾಗವನ್ನು ನಾನು ನೋಡಿರುತ್ತೇನೆ. ದಾವಾ ಜಮೀನಿನ ಪೂರ್ವ ದಿಕ್ಕಿಗೆ ವಾದಿಯ ತಾಯಿಯ ಹೊಲ ಇದೆ ಎಂದರೆ ನನಗೆ ಗೊತ್ತಿಲ್ಲ. ಆ ನಂತರ ಅರಣ್ಯ ಇಲಾಖೆಯ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಎ.ಸಿ ಮತ್ತು ತಹಶೀಲ್ದಾರರು ಹಕ್ಕು ಪತ್ರಗಳನ್ನು ಕೊಟ್ಟಿರುತ್ತಾರೆ. ನನಗೆ ಯಾವುದೇ ಹಕ್ಕುಪತ್ರ ಕೊಟ್ಟಿರುವುದಿಲ್ಲ. ಯಾರಿಗೂ ಎ.ಸಿ ಮತ್ತು ತಹಶೀಲ್ದಾರರು ಹಕ್ಕು ಪತ್ರಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಖೋಟ್ಟಿ ಹಕ್ಕುಪತ್ರ ಇಟ್ಟುಕೊಂಡು ಸರ್ಕಾರದಿಂದ ಫಲಾನುಭವಿಯಾಗಿ ದುಡ್ಡು ತೆಗೆದುಕೊಂಡಿರುತ್ತಾನೆ ಎಂದರೆ ಸರಿಯಲ್ಲ. ವಾದಿಯ ಜಮೀನಿನಲ್ಲಿ ಪೂರ್ವ ದಿಕ್ಕಿಗೆ ಅನಧಿಕೃತವಾಗಿ ಮನೆ ಕಟ್ಟುತ್ತಿದ್ದಾನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.